ಕೋಲಾರ ಡಿಸ್ಟ್ರಿಕ್ಟ್ ರೇಷ್ಮೆ ಬೆಳೆಗಾರರಿಗೆ ಬಿತ್ತನೆಯ ಸರಬರಾಜನ್ನು ಜಾಸ್ತಿ ಮಾಡುವ ಬಗ್ಗೆ

೨೦೭೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ ಪಶು ಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗಾರರ ಸರಾಸರಿ ಬಿತ್ತನೆಯ ಬೇಡಿಕೆ ತಿಂಗಳೊಂದಕ್ಕೆ ಎಷ್ಟು ?

ಆ) ತಿಂಗಳೊಂದರಲ್ಲಿ ಸರಾಸರಿ ಉತ್ಪಾದನೆ ?

ಇ) ಎಲ್ಲಾ ತಾಲ್ಲೂಕುಗಳಲ್ಲಿ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳ ಕಟ್ಟಡಗಳು ಒಳ್ಳೆಯ ಬಿತ್ತನೆಯನ್ನು ಸರಬರಾಜು ಮಾಡಲು ಸಜ್ಜು ಮಾಡಲಾಗಿದೆಯೋ ?

ಶ್ರೀ ಕೆ. ಎಂ. ಕೃಷ್ಣರೆಡ್ಡಿ (ರೇಷ್ಮೆ ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಸಚಿವರು).—

ಅ) ಕೋಲಾರ ಜಿಲ್ಲೆಯ ತಾಲ್ಲೂಕುವಾರು ಅಂದಾಜು ಸರಾಸರಿ ರೇಷ್ಮೆ ಮೊಟ್ಟೆಗಳ ಬೇಡಿಕೆಯು ಈ ಕೆಳಕಂಡತಿದೆ.

ಕ್ರಮ ಸಂಖ್ಯೆ	ತಾಲ್ಲೂಕು		ರೇಷ್ಮೆ ಮೊಟ್ಟೆಗಳ ಬೇಡಿಕೆ (ಲಕ್ಷಗಳಲ್ಲಿ)
೧	ಕೋಲಾರ	...	೫.೪೧
೨	ಮುಳಬಾಗಿಲು	...	೨.೫೩
೩	ಮಾಲೂರು	...	೨.೫೧
೪	ಬಂಗಾರುಪೇಟೆ	...	೧.೭೯
೫	ಶ್ರೀನಿವಾಸಪುರ	...	೨.೨೭
೬	ಚಿಕ್ಕಬಳ್ಳಾಪುರ	...	೨.೮೫
೭	ಶಿಡ್ಲಘಟ್ಟ	...	೪.೬೭
೮	ಚಿಂತಾಮಣಿ	...	೪.೫೯
೯	ಗೌರಿಬಿದನೂರು	...	೩.೫೦
೧೦	ಬಾಗೇಪಲ್ಲಿ	...	೦.೯೭
೧೧	ಗುಡಿಬಂಡೆ	...	೦.೬೧

ಆ) ಎಲ್ಲಾ ವಿಜನ್ಸಿಗಳಿಂದ ರೇಷ್ಮೆ ಮೊಟ್ಟೆಗಳ ಸರಾಸರಿ ಉತ್ಪಾದನೆಯು ತಿಂಗಳೊಂದಕ್ಕೆ ೩೨ ಲಕ್ಷಗಳು.

ಇ) ಹೌದು.

ನಂದಿ ಹಸ್ಬಿ ಟೆಕ್ಸ್‌ಟೈಲ್ಸ್ ಮಿಲ್ ಬಗ್ಗೆ.

೨೧೦೬. ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ದಿನಾಂಕ ೯-೧೨-೧೯೮೫ರ ಆದೇಶ ಸಂಖ್ಯೆ. ಸಿಐ ೮೦ ಪಿಯುಎಂ ೮೫(೧) ರಲ್ಲಿ ಸರ್ಕಾರದ ಪ್ರತಿನಿಧಿಗಳನ್ನು ನಂದಿಹಸ್ಬಿ ಟೆಕ್ಸ್‌ಟೈಲ್ಸ್ ನಿರ್ದೇಶಕರ ಮಂಡಳಿಯಲ್ಲಿ ನೇಮಿಸಲಾಗಿದೆಯೇ ?